**O.S. No. 12/2017 ಡಿಡಬ್ಲ್ಯು3**

ದಿನಾಂಕಃ **24.03.2025**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ-

ನಾವು ಮತ್ತು ವಾದಿಯರು ಒಂದೇ ಊರಿನವರು. 3 ಮತ್ತು 4 ನೇ ಪ್ರತಿವಾದಿಯರು ನಮ್ಮ ಊರಿನವರೇ. 3 ಮತ್ತು 4 ನೇ ಪ್ರತಿವಾಯರ ಜೊತೆ ನಾನು ಚೆನ್ನಾಗಿದ್ದೇನೆ. 3 ನೇ ಪ್ರತಿವಾದಿಯರ ಬಳಿ ವಿಚಾರಿಸಿ ಸರ್ವೆ ನಂಬರ್ 35/2 ಆಸ್ತಿಯನ್ನು ಖರೀದಿಸಿರುತ್ತೇನೆ. ಸರ್ವೆ ನಂಬರ್ 35 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನಿದೆ ಎಂದು ಹೇಳಲಿಕ್ಕಾಗುವುದಿಲ್ಲ. ಸರ್ವೆ ನಂಬರ್ 35/2 ಮೂಲತಃ ಹುಲುಗಮ್ಮನ ಗಂಡ ದ್ಯಾವಪ್ಪನ ಸ್ವತ್ತು ಎಂದರೆ ಸರಿಯಲ್ಲ. ಹುಲುಗಮ್ಮನಿಗೆ ಕೊಟ್ರಪ್ಪ ಎಂಬ ಮಗ ಇದ್ದ ಎಂದರೆ ನನಗೆ ಗೊತ್ತಿಲ್ಲ. ಕೊಟ್ರಪ್ಪನಿಗೆ ನಾಗಮ್ಮ ಎಂಬ ಹೆಂಡತಿ ಇದ್ದ ವಿಚಾರ ನನಗೆ ಗೊತ್ತಿಲ್ಲ. ಯಾರು ಮೊದಲು ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ದ್ಯಾವಪ್ಪನು ತೀರಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಹುಲುಗಮ್ಮ ಮತ್ತು ನಾಗಮ್ಮ ಮಾತ್ರ ದಾವಾ ಆಸ್ತಿಯ ಮಾಲೀಕರಾಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಅವರ ವಾರಸುದಾರರಿಗೆ ಬಿಟ್ಟರೆ ಬೇರೆಯವರಿಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ಹುಲುಗಮ್ಮ ದಾಖಲೆಗಳನ್ನು ಸೃಷ್ಟಿಸಿದ್ದಾರೆ ಎನ್ನುವುದು ಸರಿಯಲ್ಲ. ಸೃಷ್ಟಿಸಿದ ದಾಖಲೆಗಳ ಆಧಾರದಲ್ಲಿ ತನ್ನ ಹೆಸರಿಗೆ ಖಾತೆಗಳನ್ನು ಬದಲಾವಣೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಹುಲುಗಮ್ಮ ಮತ್ತು ನಾಗಮ್ಮನ ಆಸ್ತಿಗಳು ಎನ್ನುವುದು ಸರಿಯಲ್ಲ. ಸೃಷ್ಟಿಸಿದ ದಾಖಲೆಗಳ ಆಧಾರದಲ್ಲಿ ನನಗೆ ಮಾರಾಟ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಹುಲುಗಮ್ಮ ಮತ್ತು ನಾಗಮ್ಮನಿಗೂ, 3 ನೇ ಪ್ರತಿವಾದಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಯಾವುದೇ ಪ್ರತಿಫಲಕೊಡದೇ ಸುಮ್ಮನೇ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಕ್ರಮಬದ್ದ ಖರೀದಿದಾರನಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿಯರ ಆಸ್ತಿಗಳು ಎನ್ನುವುದು ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಮತ್ತು ವಗೈರೆಗಳು ಇಲ್ಲ ಎಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಕಾರಿಪುರ.